**DW-2:** ಗಂಗಮ್ಮ

ದಿನಾಂಕಃ **19.06.2026** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಭೋದಿಸಲಾಯಿತು.

**<u>ಮುಖ್ಯ ವಿಚಾರಣೆಃ ಪ್ರತಿವಾದಿ ಪರವಾಗಿ ಶ್ರೀ ಡಿ.ಆರ್.ಆರ್. ವಕೀಲರಿಂದಃ</u>**

ನಾನು ಮುಖ್ಯ ವಿಚಾರಣೆ ಪ್ರಮಾಣಪತ್ರವನ್ನು ಸಲ್ಲಿಸಿದ್ದು ಅದರಲ್ಲಿರುವ ಎಲ್ಲಾ ಅಂಶಗಳು ಸತ್ಯವಾಗಿದ್ದು ಅವುಗಳನ್ನು ನಾನೇ ಹೇಳಿ ಬರೆಯಿಸಿರುತ್ತೇನೆ. ಅದರಲ್ಲಿರುವ ಸಹಿ ನನ್ನದೇ ಆಗಿರುತ್ತದೆ.

**<u>ಪಾಟೀ ಸವಾಲುಃ ವಾದಿ ಪರವಾಗಿ ಶ್ರೀ ಡಿ.ಪಿ.ಆರ್. ವಕೀಲರಿಂದಃ</u>**

1. ನನಗೆ ಎಷ್ಟು ವರ್ಷ ವಯಸ್ಸಾಗಿದೆ ಎಂದು ನನಗೆ ಗೊತ್ತಿಲ್ಲ. ನಾನು ಮತ್ತು 1 ನೇ ಪ್ರತಿವಾದಿ ಗೌರಮ್ಮ ಒಂದೇ ದಿನ ಕೆ.ಟಿ. ಹಳ್ಳಿ ಗ್ರಾಮದಲ್ಲಿ ಹುಟ್ಟಿರುತ್ತೇವೆ. ನಮ್ಮ ತಂದೆಯ ಹೆಸರು ಈರಣ್ಣ ಮತ್ತು ತಾಯಿಯ ಹೆಸರು ಮಾಲುರಮ್ಮ. ಲಕ್ಷ್ಮಪ್ಪ 10 ವರ್ಷಗಳ ಹಿಂದೆ ಮೃತಪಟ್ಟಿರುತ್ತಾರೆ. ನನ್ನ ಮುಖ್ಯವಿಚಾರಣಾ ಪ್ರಮಾಣಪತ್ರದ ವಿಚಾರಗಳು ನನಗೆ ಗೊತ್ತಿಲ್ಲ. ಲಕ್ಷ್ಮಪ್ಪ ರವರ ಹಿರಿಯ ಹೆಂಡತಿ ಗೌರಮ್ಮ ಎಂದರೆ ಸರಿ. ಗೌರಮ್ಮ ರವರಿಗೆ ನಾಗಮ್ಮ ಮತ್ತು ಶೇಖಪ್ಪ ಎಂದು ಇದ್ದು ಮಗ ಮೃತಪಟ್ಟಿರುತ್ತಾನೆ. ಗೌರಮ್ಮ ರವರ ಮಗನ ಹೆಸರು ಕೇಶಣ್ಣ ಎಂದರೆ ಸರಿಯಲ್ಲ. ನಾಗಮಣಿ ಮೃತಪಟ್ಟಿರುತ್ತಾರೆ. ನಾಗಮಣಿ ರವರ ಗಂಡನ ಹೆಸರು ಮಹಾಲಿಂಗಪ್ಪ.

2. ವಾದಿ 2 ಮತ್ತು 3 ರವರು ನಾಗಮಣಿ ಮತ್ತು ಮಹಾಲಿಂಗರವರ ಮಕ್ಕಳು ಎಂದರೆ ಸರಿ. ನಾಗಮಣಿಯ ಸ್ವತ್ತು ಅವರ ಮಕ್ಕಳಾದ ವಾದಿ 2 ಮತ್ತು 3 ರವರಿಗೆ ಸೇರುತ್ತದೆ ಎಂದರೆ ಗೊತ್ತಿಲ್ಲ. ಪಾಲು ಪಾರಿಕತ್ ಗೆ ನಾಗಮಣಿ ಮತ್ತು ಆಕೆಯ ಗಂಡ ಮಕ್ಕಳು ಸಹಿ ಮಾಡಿಲ್ಲ. ನಾನು ಮತ್ತು ಗೌರಮ್ಮ ರವರು ಒಂದೇ ದಿನ ವಿವಾಹವಾಗಿರುವ ಬಗ್ಗೆ ದಾಖಲೆ

ಹಾಜರುಪಡಿಸಿಲ್ಲ. ನಮ್ಮ ವಿವಾಹ ಎಷ್ಟು ವರ್ಷಗಳ ಹಿಂದೆ ಆಗಿದೆ ಗೊತ್ತಿಲ್ಲ. ವಾದಿಯರನ್ನು ಬಿಟ್ಟು ಪಾಲು ಪಾರಿಕತ್ ಮಾಡಿಕೊಂಡಿದ್ದು ವಾದಿಯರಿಗೂ ಸಹ ಭಾಗ ಇರುತ್ತದೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳು ನನ್ನ ಗಂಡನ ಭಾಗಕ್ಕೆ ಬಂದ ಆಸ್ತಿಗಳು ಎಂದರೆ ಸರಿ. ವಾದಿಯರು ಲಕ್ಷ್ಮಪ್ಪ ರವರ ವಾರಸುದಾರರು ಎಂದರೆ ಸರಿ. ದಾವೆ ದಾಖಲಿಸುವ ಮೊದಲು ವಾದಿಯರು 1ನೇ ಪ್ರತಿವಾದಿಯನ್ನು ವಿಭಾಗ ಕೋರಿದ್ದು ಅವರಿಗೆ ತಿಳಿಯದಂತೆ ವಿಭಾಗಪತ್ರವನ್ನು ಸೃಷ್ಟಿಮಾಡಿದ್ದೇವೆ ಎಂದರೆ ಸರಿಯಲ್ಲ. ವಿಭಾಗಪತ್ರದಲ್ಲಿ ಯಾರು ಯಾರಿಗೆ ಯಾವ ಆಸ್ತಿ ಹೋಗಿದೆ ಗೊತ್ತಿಲ್ಲ. ನನ್ನ ಮಗ ಹನುಮಂತರಾಯ ವಿಭಾಗಪತ್ರವನ್ನು ಮಾಡಿಸಿರುತ್ತಾರೆ ಎಂದರೆ ಸರಿಯಲ್ಲ. ವಿಭಾಗಪತ್ರವೂ ವಾದಿಗಳಿಗೆ ಅನ್ವಯಿಸುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇಲ್ಲ.

**(ನನ್ನ ಉಕ್ತಲೇಖನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

ಓ.ಹೇ.ಕೇ.ಸರಿ ಇದೆ.

Sd/-

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ.

ಪಾವಗಡ.